ಓದುತ್ತಾರೋ ಅಷ್ಟು ಮೂಲಗಳು ಆ ಕೃತಿಗೆ ಇರುತ್ತವೆ. ನನ್ನ ಮನಸಿನಲ್ಲಿರುವ ಮೂಲ ಕುವೆಂಪು, ನಿಮ್ಮ ಮನಸಿನಲ್ಲಿರುವ ಮೂಲ ಕುವೆಂಪು ಎರಡೂ ಖಂಡಿತವಾಗಿ ಬೇರೆ ಬೇರೆ ಆಗಿರುತ್ತವೆ. ಸಮರ್ಥ ಅನುವಾದಕರು ತಾವು ಗ್ರಹಿಸಿದ ಮೂಲವನ್ನು ಕನ್ನಡದಲ್ಲಿ ಮತ್ತೊಂದು ಮೂಲವಾಗಿಯೇ ರೂಪಿಸುತ್ತಾರೆ.

> ಒಂದು ಸಾಹಿತ್ಯ ಕೃತಿಯನ್ನು ಎಷ್ಟು ಜನ ಓದುತ್ತಾರೋ ಅಷ್ಟು ಮೂಲಗಳು ಆ ಕೃತಿಗೆ ಇರುತ್ತವೆ. ನನ್ನ ಮನಸಿನಲ್ಲಿರುವ ಮೂಲ ಕುವೆಂಪು, ನಿಮ್ಮ ಮನಸಿನಲ್ಲಿರುವ ಮೂಲ ಕುವೆಂಪು ಎರಡೂ ಖಂಡಿತವಾಗಿ ಬೇರೆ ಬೇರೆ ಆಗಿರುತ್ತವೆ. ಕವಿ ಮರೆಯಾದರೂ ಕವಿತೆ ಉಳಿಯುತ್ತದೆ. ಒಳ್ಳೆಯ ಅನುವಾದವೂ ಅಷ್ಟೆ...

ಕೆ.ಎಸ್.ನ. ಅವರ ಹಾಡನ್ನು ಅವರಿಗೇ ಹಾಡಿ ಭಿಕ್ಷೆ ಪಡೆದ ಕತೆ ಕೇಳಿದ್ದೀರಲ್ಲವೇ? ಕವಿ ಮರೆಯಾದರೂ ಕವಿತೆ ಉಳಿಯುತ್ತದೆ. ಒಳ್ಳೆಯ ಅನುವಾದವೂ ಅಷ್ಟೆ, 'ಮೂಲ' ಲೇಖಕರನ್ನು ಕೇಳಿ ನೋಡಿ, ಅನುವಾದಕರಿಗಿಂತ ಮಿಗಿಲಾಗಿಯೇ ಅವರು ಬರವಣಿಗೆಯ ಬಗ್ಗೆ ಓದುಗರಲ್ಲಿರುವ ತಾತ್ಸಾರದ ಬಗ್ಗೆ ಹೇಳುತ್ತಾರೆ!

ಕುವೆಂಪು ಕುವೆಂಪು ರೀತಿಯಲ್ಲೇ, ಕೀಟ್ಸ್ ಕೀಟ್ಸ್ ಥರದಲ್ಲೇ, ಜಯಂತ ಕಾಯ್ಕಿಣಿ ಜಯಂತ ಕಾಯ್ಕಿಣಿಯ ಹಾಗೆಯೇ ಬರೆಯಬೇಕು, ಅವರ ಕರ್ಮ! ಅನುವಾದಕರಿಗೆ ಮಾತ್ರ ಬೇರೆ ಇನ್ನೊಂದು ಮನಸ್ಸನ್ನು ಹೊಕ್ಕು ಆ ಮನಸಿಗೆ ಲೋಕ ಕಂಡ ಹಾಗೆ, ಆ ಮನಸಿನ ಭಾಷೆಯಲ್ಲಿ ಅದು ರೂಪು ತಳೆದ ಹಾಗೆ ತನ್ನ ಭಾಷೆಯಲ್ಲಿ ಸೃಷ್ಟಿಸುವ ಅವಕಾಶವಿದೆ. ಅಲ್ಲದೆ ಕೃತಿಯೊಂದು ಅನುವಾದಗೊಂಡ ಅನಂತರವೇ ಆ ಕೃತಿಗೆ 'ಮೂಲ' ಎಂಬ ಪಟ್ಟ ದೊರೆಯುವುದಲ್ಲವೇ! ಅನುವಾದ ಸೃಜನಶೀಲ ಅನ್ನುವುದರಲ್ಲಿ ಹೆಚ್ಚುಗಾರಿಕೆಯಿಲ್ಲ, ಹೊಣೆಗಾರಿಕೆ ಇದೆ.

ಇದೆಲ್ಲ ನಿಜ. ಆದರೂ ಅನುವಾದ ಕೃತಿಯ ವಿಮರ್ಶೆಯಾಗಲೀ, ಅನುವಾದದ ಚರ್ಚೆಯಾಗಲೀ ನಡೆಯಬೇಕಾದಷ್ಟು ನಡೆದಿಲ್ಲ, ಅನುವಾದಕರಿಗೆ ಮನ್ನಣೆ ದೊರೆಯಬೇಕಾದಷ್ಟು ದೊರೆತಿಲ್ಲ ಅನ್ನುವುದು ತೀರ, ತೀರ ನಿಜ.

ನವೋದಯ ಕಾಲದ ಲೇಖಕರು ಇತರ ಭಾರತೀಯ ಭಾಷೆಗಳ ಬಗ್ಗೆ ತೋರುತ್ತಿದ್ದ ಆದರ, ಪ್ರೀತಿ ಸುಮಾರಾಗಿ ಎಪ್ಪತ್ತರ ದಶಕದ ನಂತರ ಕಡಮೆಯಾಗುತ್ತ ಬಂದಿತು. ಇಂಗ್ಲಿಷ್ ಮಾತ್ರವೇ ಜ್ಞಾನದ ಭಾಷೆ ಅನ್ನುವ ಒತ್ತಡಕ್ಕೆ ಅನುವಾದಕರೂ ಗುರಿಯಾದರು. ದಕ್ಷಿಣದ ನೆರೆಹೊರೆಯ ಭಾಷೆಗಳಿಂದ ಕನ್ನಡಕ್ಕೆ, ಕನ್ನಡದಿಂದ ಆ ಭಾಷೆಗಳಿಗೆ ಅನುವಾದ ಮಾಡಬಲ್ಲವರು ಇದ್ದಾರೆ, ಆದರೆ ಇತರ ಭಾರತೀಯ ಭಾಷೆಗಳ ಒಡನಾಟ ಇರುವ ಅನುವಾದಕರ ಸಂಖ್ಯೆ ಬೆರಳೆಣಿಕೆಯಷ್ಟೂ ಸಿಗುವುದಿಲ್ಲ. ಭಾಷೆಗಳ ಬಗ್ಗೆ ಅವಜ್ಞೆ ನಮ್ಮ ಕಾಲದ ಮುಖ್ಯ ಲಕ್ಷಣವೇ ಆಗಿದೆ ಅನಿಸುತ್ತದೆ.

ಮಾಹಿತಿ ಮಾತ್ರವೇ ಮುಖ್ಯ, ಅರ್ಥಮಾತ್ರವೇ ಮುಖ್ಯ ಎಂಬ ಮನೋಧರ್ಮ ಪ್ರಬಲವಾಗಿದ್ದಾಗ ಸಾಹಿತ್ಯವಾಗಲೀ ಅನುವಾದವಾಗಲೀ ನಿರ್ಲಕ್ಷ್ಯಕ್ಕೆ ಒಳಗಾಗುವುದು ತೀರ ಸಹಜ.